**Code No. 20 Y**

## ವಾಣಿಜ್ಯ ಪರೀಕ್ಷೆಗಳು

# ಕನ್ನಡ ಶೀಘ್ರಲಿಪಿ – ಪ್ರಥಮ ದರ್ಜೆ – ದ್ವಿತೀಯ ಪತ್ರಿಕೆ

# (ಸೂತ್ರಗಳು)

ಜುಲೈ, 2015

ಸಮಯ : 1 ಗಂಟೆ 30 ನಿಮಿಷಗಳು

ಅಂಕಗಳು : 100

***ಸೂಚನೆ :*** ಉತ್ತರಗಳು ಸಂಕ್ಷಿಪ್ತ ಹಾಗೂ ಸಮಂಜಸವಾಗಿರಬೇಕು.

1. ಯಾವುದಾದರೂ ಐದು ಅಂತ್ಯಸರ್ಗಗಳ ಉಪಯೋಗವನ್ನು ಸಂಕ್ಷೇಪವಾಗಿ ಬರೆಯಿರಿ. 10

2. ದ್ವಿರೂಪ ವ್ಯಂಜನ 'ತ–ದ'ವನ್ನು ಉದಾಹರಣೆಯೊಂದಿಗೆ ವಿವರಿಸಿ. 10

3. ಶೀಘ್ರಲಿಪಿಯಲ್ಲಿ ಸೇರಿಸಿ ಬರೆಯುವ ಸ್ವರಗಳ ಪ್ರಯೋಗಗಳನ್ನು ಉದಾಹರಣೆಯೊಂದಿಗೆ ವಿವರಿಸಿ. 10

4. ಈ ಕೆಳಗಿನವುಗಳಲ್ಲಿ ಯಾವುದಾದರೂ **ನಾಲ್ಕಕ್ಕೆ** ಟಿಪ್ಪಣಿ ಬರೆಯಿರಿ : 4 × 5 = 20

   ಅ) ದ್ವಿರೂಪ 'ತವ, ದವ'

   ಆ) 'ಹ' ಪ್ರಯೋಗ

   ಇ) 'ರ' ರೇಖಾಕ್ಷರಗಳ ಅಂತ್ಯ ಸರ್ಗಗಳು

   ಈ) ಅರ್ಧಾಕ್ಷರ ಸೂತ್ರವನ್ನು ಬಳಸದಿರುವಿಕೆ

   ಉ) ಆದಿಯಲ್ಲಿ ಸಣ್ಣ ಕೊಕ್ಕೆಗಳು

5. ಈ ಕೆಳಗಿನವುಗಳಲ್ಲಿ ಯಾವುದಾದರೂ **ಐದು** ಪದಗಳಿಗೆ ಸಂಕ್ಷೇಪಣೆ ಬರೆಯಿರಿ : 5 × 1 = 5

   ಅ) ಕರ್ನಾಟಕ

   ಆ) ಕಾರ್ಯಕ್ರಮ

   ಇ) ಮಹಾಶಯರೆ

   ಈ) ತೋಟಗಾರಿಕೆ

   ಉ) ಅಂಕಿ ಅಂಶಗಳು

   ಊ) ತಂದೆ ತಾಯಿಗಳು

[ Turn over

6. ಈ ಕೆಳಗಿನವುಗಳಲ್ಲಿ ಯಾವುದಾದರೂ ***ಐದಕ್ಕೆ*** ಛೇದಿಸುವಿಕೆ ಪದಗಳನ್ನು ಬರೆಯಿರಿ : 5 × 1 = 5

ಅ) ಅದೇ ರೀತಿ

ಆ) ಅಕ್ಕ ಪಕ್ಕ

ಇ) ಸುಖ ದುಃಖ

ಈ) ಆಯ ವ್ಯಯ

ಉ) ಕನ್ನಡ ಚಳುವಳಿಗಾರರು

ಊ) ಊಹಾ ಪೋಹ

7. ಈ ಕೆಳಗಿನವುಗಳಲ್ಲಿ ಯಾವುದಾದರೂ ***ಐದಕ್ಕೆ*** ಪದಗಳ ಸಮೂಹಗಳನ್ನು ಬರೆಯಿರಿ : 5 × 1 = 5

ಅ) ರಾಜಕೀಯ ಸುಧಾರಣೆ

ಆ) ಕುಡಿಯುವ ನೀರಿನ ಬಾವಿಗಳು

ಇ) ಒಳಚರಂಡಿ ವ್ಯವಸ್ಥೆ

ಈ) ಅಣ್ಣ ತಮ್ಮಂದಿರು

ಉ) ನೀರಾವರಿ ಸೌಲಭ್ಯಗಳು

ಊ) ಕನ್ನಡ ಭಾಷಾ ಸಮಿತಿ

8. ಈ ಕೆಳಗಿನ ಖಾಲಿ ಜಾಗಗಳನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿ : 5 × 1 = 5

ಅ) ರೇಖಾಕ್ಷರದ ಮಧ್ಯೆ ಬರುವ 'ಯ' ಮತ್ತು 'ವ' ವ್ಯಂಜನವನ್ನು .................. ಸೂಚಿಸಬೇಕು.

ಆ) 'ಸ್ತ' ಅಥವಾ 'ಷ್ಟ' ಮತ್ತು ರ ನಡುವೆ ಸ್ವರ ಬಂದರೆ .......................ಯನ್ನು ಉಪಯೋಗಿಸಬಾರದು.

ಇ) 'ಲ' ರೇಖಾಕ್ಷರವನ್ನು ಅಂತ್ಯದಲ್ಲಿ ಬಿಡಿಸಿ ಬರೆದರೆ .......................... .................... ಎಂಬುದನ್ನು ಸೂಚಿಸಬೇಕು.

ಈ) 'ಯ' ಮತ್ತು 'ಹ' ರೇಖಾಕ್ಷಗಳ ಪ್ರಾರಂಭದಲ್ಲಿ .......................... .................... ಕೊಕ್ಕೆಯನ್ನು ಉಪಯೋಗಿಸಲಾಗುವುದಿಲ್ಲ.

ಉ) ಒಂದು ಸಣ್ಣ ವೃತ್ತವನ್ನು ರೇಖಾಕ್ಷರದ ಮಧ್ಯದಲ್ಲಿ ಬಿಡಿಸಿ ಬರೆದರೆ ಅದು ..................... ಪ್ರತ್ಯಯವನ್ನು ಸೂಚಿಸುತ್ತದೆ.

9. ಈ ಕಳಗೆ ಕೊಟ್ಟಿರುವ ವಿಷಯವನ್ನು ಶೀಘ್ರಲಿಪಿಯಲ್ಲಿ ಅಗತ್ಯವಿರುವ ಕಡೆ ಸ್ವರಚಿಹ್ನೆಗಳನ್ನು ಉಪಯೋಗಿಸಿ ಬರೆಯಿರಿ : 30

ಮಾನ್ಯ ಸಭಾಪತಿಯವರೇ,

ಈ ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳ ಮೇಲೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಕೈಗಾರಿಕಾ ಕ್ಷೇತ್ರ ಪ್ರಗತಿಯಾಗಬೇಕಾದರೆ ನಮ್ಮ ಸರ್ಕಾರದವರು ಪ್ರಥಮವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಹೆಚ್ಚು ಕೈಗಾರಿಕಾ ಕೇಂದ್ರಗಳನ್ನು ಸ್ಥಾಪನೆ ಮಾಡಲು ಕ್ರಮ ತೆಗೆದುಕೊಳ್ಳಬೇಕು. ಅದರಲ್ಲಿಯೂ ಮುಖ್ಯವಾಗಿ ಗುಡಿ ಕೈಗಾರಿಕೆಗಳಿಗೆ ಹೆಚ್ಚಿನ ಆದ್ಯತೆ ಕೊಡಬೇಕು. ಈ ಮೂಲಕ ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಗೆ ಸಾಕಷ್ಟು ಗಮನ ಕೊಟ್ಟರೆ ನಿಜವಾಗಿಯೂ ನಮ್ಮ ರಾಜ್ಯದಲ್ಲಿರತಕ್ಕಂಥ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಬಹುದೆಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಕೈಗಾರಿಕೆಗಳನ್ನು ಸ್ಥಾಪಿಸಲು ಮುಂದೆ ಬರುವವರಿಗೆ ಸರ್ಕಾರದ ವತಿಯಿಂದ ಕೊಡತಕ್ಕ ಸಾಲದ ವ್ಯವಸ್ಥೆ ಏನಿದೆ, ಅದನ್ನು ಸಕಾಲದಲ್ಲಿ ಯಾವ ಅಡ್ಡಿ ಆತಂಕಗಳು ಇಲ್ಲದೆ ಕೊಡುವಂತಹ ಒಂದು ವ್ಯವಸ್ಥೆಯಾಗಬೇಕು. ಇದಕ್ಕೆ ಕಾರಣವೇನೆಂದರೆ, ಇತ್ತೀಚೆಗೆ ಕೈಗಾರಿಕಾ ಇಲಾಖೆಯಲ್ಲಿ ಲಂಚರುಷುವತ್ತುಗಳು ದಿನೇದಿನೇ ಹೆಚ್ಚಾಗುತ್ತಿವೆ. ಇದನ್ನು ತಡೆಗಟ್ಟಲು ಸರ್ಕಾರದವರು ಬಿಗಿಯಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಒಂದು ಸಣ್ಣ ಕೈಗಾರಿಕೆಯನ್ನು ಸ್ಥಾಪನೆ ಮಾಡಬೇಕಾದರೆ ಸಂಬಂಧಪಟ್ಟವರು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಕೈಗಾರಿಕಾ ಇಲಾಖೆಯಲ್ಲಿರುವ ಪ್ರತಿಯೊಂದು ವಿಭಾಗದಲ್ಲಿನ ಅಧಿಕಾರಿಗಳನ್ನು ಕಂಡರೆ ಮಾತ್ರ ಸಂಬಂಧಪಟ್ಟ ಕಾಗದಪತ್ರಗಳು ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗುತ್ತದೆ. ಇಲ್ಲದಿದ್ದರೆ ಆ ಕಾಗದಪತ್ರಗಳು ಒಂದೇ ಕಡೆಯಲ್ಲಿ ಕೊಳೆಯುತ್ತಾ ಬಿದ್ದಿರುತ್ತವೆ. ಈ ರೀತಿಯ ವ್ಯವಸ್ಥೆ ಹೋಗಬೇಕು.